ದಿನಾಂಕ: 22-09-2021 ರಂದು ನಡೆದ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ 34ನೇ ಸಭೆಯ ನಡವಳಿಗಳು

: ಅಧ್ಯಕ್ಷತೆ :

ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್

ಸನ್ಮಾನ್ಯ ಕಾರ್ಮಿಕ ಸಚಿವರು

ಹಾಗೂ

ಅಧ್ಯಕ್ಷರು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು.

ಹಾಜರಿದ್ದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಪ್ರತಿನಿಧಿ ಸದಸ್ಯರುಗಳು:

1. ಶ್ರೀ ನಾಗನಾಥ್, ಪ್ರಧಾನ ಕಾರ್ಯದರ್ಶಿ, ಹಿಂದ್ ಮಜ್ದೂರ್ ಸಭಾ, ಬೆಂಗಳೂರು
2. ಶ್ರೀ ಎಸ್. ಎಸ್ ಪ್ರಕಾಸಂ, ಅಧ್ಯಕ್ಷರು, ಐಎನ್‌ಟಿಯುಸಿ, ಬೆಂಗಳೂರು
3. ಶ್ರೀಮತಿ ಶಿವಾನಿ ಶಾಂತರಾಮ ಭಟ್ಕಳ, ರಾಜ್ಯ ಪ್ರತಿನಿಧಿ ಸದಸ್ಯರು, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು
4. ಶ್ರೀ ವಿಶ್ವನಾಥ್ ಶೆಟ್ಟಿ ಅಧ್ಯಕ್ಷರು. ಭಾರತೀಯ ಮಜ್ದೂರ್ ಸಂಘ, ಬೆಂಗಳೂರು

ಹಾಜರಿದ್ದ ಅಧಿಕಾರಿ ಅಥವಾ ಅವರ ನಾಮ ನಿರ್ದೇಶಿತ ಸದಸ್ಯರು:

1. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಕಲ್ಯಾಣ ಸುರಕ್ಷಾ ಭವನ, ಬೆಂಗಳೂರು
2. ಕಲ್ಯಾಣ ಆಯುಕ್ತರು, ಭಾರತ ಸರ್ಕಾರ, ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯ, ಕಾರ್ಮಿಕ ಕಲ್ಯಾಣ ಸಂಸ್ಥೆ, ಬೆಂಗಳೂರು-ಇವರ ಪರವಾಗಿ ಶ್ರೀ.ರಾಮದುರ್ಗಾ ಪ್ರಸಾದ್,
3. ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು-ಇವರ ಪರವಾಗಿ ಜಂಟಿ ಕಾರ್ಯದರ್ಶಿಗಳು.
4. ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು-ಇವರ ತಾಂತ್ರಿಕ ಸಹಾಯಕರು.

ಗೈರು ಹಾಜರಿದ್ದವರು: -

1. ಶ್ರೀಮತಿ ಡಾ.ಜಿ.ಕಲ್ಪನಾ, ಭಾ.ಆ.ಸೇ., ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ವಿಕಾಸಸೌಧ, ಬೆಂಗಳೂರು
3. ಅಧ್ಯಕ್ಷರು, CREDAI, ಬೆಂಗಳೂರು.
4. ಅಧ್ಯಕ್ಷರು, Construction Federation of India. New Delhi.
5. ಅಧ್ಯಕ್ಷರು, ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಬೆಂಗಳೂರು

******

ಮಂಡಳಿಯ ಕಾರ್ಯದರ್ಶಿಯವರು, ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಸ್ವಾಗತಿಸಿ, ಮಂಡಳಿಯ 34ನೇ ಸಭೆಯನ್ನು ನಡೆಸಿಕೊಡಬೇಕೆಂದು ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರನ್ನು ಕೋರಿದರು.

ಮಾನ್ಯ ಅಧ್ಯಕ್ಷರು ಹಾಗೂ ಕಾರ್ಮಿಕ ಸಚಿವರು ಪ್ರಥಮವಾಗಿ ಮಂಡಳಿ ವತಿಯಿಂದ ಕಾರ್ಮಿಕ ಅದಾಲತ್ ಕಾರ್ಯಕ್ರಮದ ಅಡಿಯಲ್ಲಿ ಕಾರ್ಮಿಕ ಇಲಾಖೆಯಲ್ಲಿ ತಿರುವಳಿಯಾಗದೇ ಹಲವಾರು ವರ್ಷಗಳಿಂದ ಬಾಕಿ ಉಳಿದಿದ್ದ ಎಲ್ಲಾ ಪ್ರಕ

ರಣಗಳ ಬಾಂಡ್‌ಗಳು ಹಾಗೂ ವಿವಿಧ ಸೌಲಭ್ಯದ ಕ್ಲೇಮ್ ಅರ್ಜಿಗಳನ್ನು ಒಂದು ಬಾರಿ ಇತ್ಯರ್ಥವಾಗಿ ವಿಲೇವಾರಿ ಮಾಡಲಾಗಿದೆ. ಕೋವಿಡ್-19ರ ಸಾಂಕ್ರಾಮಿಕ ರೋಗದ 2ನೇ ಅಲೆಯ ಪ್ರಯುಕ್ತ ಘೋಷಿಸಲಾದ ಲಾಕ್‌ಡೌನ್ ಸಮಯದಲ್ಲಿ ವಲಸೆ ಕಟ್ಟಡ ಕಾರ್ಮಿಕರಿಗೆ ವಿತರಿಸಲಾದ ಆಹಾರ ಸಾಮಗ್ರಿಗಳ ಕಿಟ್‌ಗಳು, ರಕ್ಷಣಾ ಮತ್ತು ನೈರ್ಮಲ್ಯೀಕರಣದ ಕಿಟ್‌ಗಳು ಹಾಗೂ ನೋಂದಾಯಿತ ಫಲನಾಭವಿಯ ಮಕ್ಕಳಿಗೆ ಉಚಿತವಾಗಿ ನೀಡಲಾಗಿದೆ. ಕೇಂದ್ರ ಸರ್ಕಾರದ ಇ-ಶ್ರಮಾ ಯೋಜನೆಯಡಿಯಲ್ಲಿ ಇ.ಎಸ್.ಐ, ಪಿ.ಎಫ್ ಮತ್ತು ಐ.ಟಿ ವ್ಯಾಪ್ತಿಗೆ ಒಳಪಡದ 144 ಅಸಂಘಟಿತ ವಲಯದ ಕಾರ್ಮಿಕ ವರ್ಗದವರಿಗೆ ಕಾರ್ಮಿಕರನ್ನು ನೋಂದಾಯಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿರುತ್ತದೆ. ಅಟಲ್‌ಜೀ ಪಿಂಚಣಿ ಯೋಜನೆಯಡಿಯಲ್ಲಿ ಕೃಷಿ ಕಾರ್ಮಿಕರು, ಸಿನಿಮ, ಪತ್ರಿಕ ವರ್ಗ, ತೋಟಗಾರಿಕೆ, ಫೋಟೋಗ್ರಾಫರ್ಸ್ ಮತ್ತು ಇತರರನ್ನು ಈ ಯೋಜನೆಯಡಿಯಲ್ಲಿ ನೋಂದಾಯಿಸಲಾಗುವುದು. ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರತಿಯೊಬ್ಬ ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ಘೋಷಿಸಲಾದ ಒಂದು ಬಾರಿ ಸಹಾಯಧನ ರೂ.3,000/- ಕೋವಿಡ್ ಪರಿಹಾರದ ಮೊತ್ತವನ್ನು ಕಾರ್ಮಿಕರ ಖಾತೆಗಳಿಗೆ ನೇರ ನಗದು ವರ್ಗಾವಣೆ ಮಾಡಿರುವ ಕುರಿತಂತೆ ಗೌರವಾನ್ವಿತ ಉಚ್ಛ ನ್ಯಾಯಾಲಯದ ನ್ಯಾಯಾಧೀಶರು ಮೆಚ್ಚುಗೆ ವ್ಯಕ್ತಪಡಿಸಿ ಒಳ್ಳೆಯ ಅಭಿಪ್ರಾಯ ನೀಡಿದ್ದು, ಕಾರ್ಮಿಕ ಇಲಾಖೆಗೆ ಗೌರವ ಮತ್ತು ಹೆಮ್ಮೆಯ ವಿಷಯವೆಂದು ಹರ್ಷಿಸುತ್ತಾ ಸಭೆಗೆ ತಿಳಿಸಿದರು ಮಂಡಳಿಯ ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗದವರಿಗೆ ಅಭಿನಂದನೆಯನ್ನು ತಿಳಿಸಿದರು.

## ವಿಷಯ ಸಂಖ್ಯೆ-02

**ಕಾರ್ಮಿಕ ಇಲಾಖೆ ವತಿಯಿಂದ ನಡೆಸಲಾದ ಕಾರ್ಮಿಕ ಅದಾಲತ್ ಆಂದೋಲನದಲ್ಲಿ ಮಂಡಳಿಗೆ ಸಂಬಂಧಪಟ್ಟ ಅರ್ಜಿಗಳ ವಿಲೇವಾರಿಯ ಪ್ರಗತಿ ಕುರಿತು**

ರಾಜ್ಯಾದ್ಯಂತ ಕೋವಿಡ್-19 ರ 1 ಮತ್ತು 2ನೇ ಅಲೆಯಿಂದಾಗಿ ಕಾರ್ಮಿಕರ ನೋಂದಣಿ, ನವೀಕರಣ ಮತ್ತು ಸೌಲಭ್ಯಗಳ ಅರ್ಜಿಗಳು ವಿವಿಧ ಹಂತದ ಕಛೇರಿಗಳಲ್ಲಿ ಬಾಕಿ ಇರುವುದಾಗಿ ಹಲವಾರು ಕಾರ್ಮಿಕ ಸಂಘಟನೆಗಳಿಂದ ದೂರುಗಳು ಬರುತ್ತಿದ್ದ ಹಿನ್ನಲೆಯಲ್ಲಿ ಇವುಗಳನ್ನು ವಿಲೇವಾರಿ ಮಾಡುವ ದೃಷ್ಟಿಯಿಂದ ರಾಜ್ಯಾದ್ಯಂತ ಕಾರ್ಮಿಕ ಆಂದೋಲನವನ್ನು ದಿನಾಂಕ 16-08-2021 ರಿಂದ ದಿನಾಂಕ 16-09-2021 ರವರೆಗೆ ಕೈಗೊಳ್ಳಲಾಗಿರುತ್ತದೆ.

ಸದರಿ ಆಂದೋಲನದಲ್ಲಿ ದಿನಾಂಕ 16-08-2021 ರಿಂದ 31-08-2021 ರವರೆಗೆ ಬಾಕಿ ಅರ್ಜಿಗಳ ವಿಲೇವಾರಿ ಪ್ರಚಾರ ಕಾರ್ಯಗಳಿಗೆ ಹೊಸ ಅರ್ಜಿಗಳ ಸ್ವೀಕಾರ ಕುರಿತು ದಿನಾಂಕ 01-09-2021 ರಿಂದ 05-09-2021 ರವರೆಗೆ ಅರ್ಜಿಗಳ ಸಲ್ಲಿಕೆಗೆ ಅವಕಾಶ ಮಾಡಿಕೊಡಲಾಗಿತ್ತು. ದಿನಾಂಕ 06-09-2021 ರಿಂದ 16-09-2021 ರವರೆಗೆ ಸ್ವೀಕೃತಿಗೊಂಡ ಅರ್ಜಿಗಳ ವಿಲೇವಾರಿಗೆ ಸಮಯ ನಿಗಧಿಪಡಿಸಲಾಗಿದೆ. ಈ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲು ಐಇಸಿ ಚಟುವಟಿಕೆಗಳನ್ನು ಮಂಡಳಿಯಿಂದ ಕೈಗೊಳ್ಳಲಾಗಿರುತ್ತದೆ.

ಕಾರ್ಮಿಕ ಆಂದೋಲನದ ಪ್ರಾರಂಭದ ಪೂರ್ವದಲ್ಲಿ ರಾಜ್ಯಾದ್ಯಂತ ಕಾರ್ಮಿಕ ಇಲಾಖೆಯ ವಿವಿಧ ಕಛೇರಿಗಳಲ್ಲಿ ಒಟ್ಟು 1.63 ಲಕ್ಷ ಅರ್ಜಿಗಳು ವಿಲೇವಾರಿಗಾಗಿ ಬಾಕಿ ಉಳಿದಿದ್ದವು. ಕಾರ್ಮಿಕ ಆಂದೋಲನದ ಸಮಯದಲ್ಲಿ ಒಟ್ಟು 1.38 ಲಕ್ಷ ಹೊಸ ಅರ್ಜಿಗಳು ಸ್ವೀಕೃತಗೊಂಡಿರುತ್ತದೆ. ಒಟ್ಟಾರೆಯಾಗಿ 3.01 ಲಕ್ಷ ಅರ್ಜಿಗಳು ವಿಲೇವಾರಿಗೆ ಬಾಕಿ ಉಳಿದಿದ್ದವು. **"ಕಾರ್ಮಿಕ ಅದಾಲತ್"** ಆಂದೋಲನದಿಂದ ರಾಜ್ಯಾದ್ಯಂತ ಒಟ್ಟು 2.81 ಲಕ್ಷ ಅರ್ಜಿಗಳನ್ನು ವಿಲೇವಾರಿ ಮಾಡಿ ಅರ್ಹ ಸೌಲಭ್ಯಗಳನ್ನು ಫಲಾನುಭವಿಗಳಿಗೆ ಒದಗಿಸುವಲ್ಲಿ ಯಶಸ್ಸು ಕಾಣಲಾಗಿರುತ್ತದೆ. ಉಳಿದ ಅರ್ಜಿಗಳನ್ನು ಆದ್ಯತೆ ಮೇರೆಗೆ ವಿಲೇವಾರಿ ಮಾಡುವ ಕಾರ್ಯ ಪ್ರಗತಿಯಲ್ಲಿರುತ್ತದೆ. ಇದಕ್ಕಾಗಿ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದರು

**ತೀರ್ಮಾನ:**

**ಕಾರ್ಮಿಕ ಇಲಾಖೆಯ ಅಧಿಕಾರಿಗಳು/ ಸಿಬ್ಬಂದಿಗಳ ಕೊರತೆ ಇದ್ದಾಗ್ಯೂ "ಕಾರ್ಮಿಕ ಅದಾಲತ್" ಆಂದೋಲನವನ್ನು ಹಮ್ಮಿಕೊಂಡು ರಾಜ್ಯಾದ್ಯಂತ ಒಟ್ಟು 2.81 ಲಕ್ಷ ಅರ್ಜಿಗಳನ್ನು ವಿಲೇವಾರಿ ಮಾಡಿ ಅರ್ಹ ಸೌಲಭ್ಯಗಳನ್ನು ಫಲಾನುಭವಿಗಳಿಗೆ ಒದಗಿಸುವಲ್ಲಿ ಯಶಸ್ಸು ಕಾಣಲಾಗಿರುತ್ತದೆ. ಉಳಿಕೆಯಿರುವ ಅರ್ಜಿಗಳನ್ನು ಆದ್ಯತೆ ಮೇರೆಗೆ ವಿಲೇವಾರಿ ಮಾಡುವ ಕಾರ್ಯ ಪ್ರಗತಿಯಲ್ಲಿರುತ್ತದೆ ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ನಂತರ, ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.**

## ವಿಷಯ ಸಂಖ್ಯೆ-03

**ಮಂಡಳಿಯ ನೋಂದಾಯಿತ ಕಾರ್ಮಿಕರಿಗೆ 2021-22ನೇ ಸಾಲಿನಲ್ಲಿ ಬಿಎಂಟಿಸಿ ಬಸ್‌ಪಾಸ್ ಸೌಲಭ್ಯವನ್ನು ಒದಗಿಸುವ ಕುರಿತು**

ಮಂಡಳಿಯ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳ ಪೈಕಿ ನೋಂದಯಿತ ಕಾರ್ಮಿಕರಿಗೆ ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಕೆಲಸಕ್ಕೆ ತೆರಳಲು ಅನುಕೂಲವಾಗಲು BMTC ಬಸ್‌ಪಾಸ್ ಸೌಲಭ್ಯ ಒದಗಿಸುವ ಯೋಜನೆ ಒಂದಾಗಿರುತ್ತದೆ. ಈ ಯೋಜನೆಯಡಿ ಇದುವರರೆಗೂ 68,148 ಫಲಾನುಭವಿಗಳು ಒಟ್ಟು 7,64,831 ಮಾಹೆಗಳು ಬಸ್ ಪಾಸ್ ಸೌಲಭ್ಯ ಪಡೆದಿದ್ದು ಇದುವರೆಗೂ ಇದಕ್ಕಾಗಿ ರೂ.80.00 ಕೋಟಿ ಖರ್ಚು ಮಾಡಲಾಗಿರುತ್ತದೆ.

2021-22 ನೇ ಸಾಲಿನ ಮಂಡಳಿಯ ಆಯವ್ಯಯದಲ್ಲಿ BMTC ಬಸ್‌ಪಾಸ್ ಸೌಲಭ್ಯಕ್ಕಾಗಿ ಒಟ್ಟು ರೂ.80.00 ಕೋಟಿಗಳ ಅನುದಾನವನ್ನು ಮೀಸಲಿಟ್ಟು ಸರ್ಕಾರದಿಂದ ಅನುಮೋದನೆಯನ್ನು ಪಡೆಯಲಾಗಿರುತ್ತದೆ. ಪ್ರಸ್ತುತ ಕೋವಿಡ್ ಪರಿಸ್ಥಿತಿ ಇರದ ಕಾರಣ ಬಸ್ಸುಗಳು ಓಡಾಟ ಪ್ರಾರಂಭಿಸಿದ್ದು, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಸಹ ಎಂದಿನಂತೆ ತಮ್ಮ ಕೆಲಸಗಳಿಗೆ ಬಸ್ ಸೇವೆಯನ್ನು ಪಡೆಯುತ್ತಿರುವುದು ಕಂಡು ಬಂದಿರುತ್ತದೆ. ಹಾಗಾಗೀ ಸದರಿ ಸಾಲಿನಲ್ಲಿ BMTC ಬಸ್‌ಪಾಸ್ ವಿತರಣೆಯನ್ನು ಮಾಡಲು ಅನುಮೋದನೆಗಾಗಿ ಮಂಡಿಸಿದರು.

**ತೀರ್ಮಾನ:**

**ಬಸ್ ಪಾಸ್ ಸೇವೆಯನ್ನು ಬೆಂಗಳೂರು BMTC ವ್ಯಾಪ್ತಿಯಲ್ಲಿ ಕಟ್ಟಡ ಕಾರ್ಮಿಕರಿಗೆ ಬಸ್‌ಪಾಸ್ ನೀಡಲು ಹಾಗೂ ಕರ್ನಾಟಕ ರಾಜ್ಯರಸ್ತೆ ಸಾರಿಗೆ ನಿಗಮಗಳಡಿಯಲ್ಲಿ ರಾಜ್ಯದ ನಾಲ್ಕೂ ವಿಭಾಗದ (ಬಿ.ಎಂ.ಟಿ.ಸಿ, ಕೆ.ಎಸ್.ಆರ್.ಟಿ.ಸಿ, ಎನ್.ಡಬ್ಲ್ಯೂ.ಕೆ.ಎಸ್.ಆರ್.ಟಿ.ಸಿ, ಎನ್.ಇ.ಕೆ.ಎಸ್.ಆರ್.ಟಿ.ಸಿ) ಈ ನಾಲ್ಕೂ ವಿಭಾಗದ ಸಂಸ್ಥೆಗಳಿಂದ ಮಂಡಳಿಯ ಫಲಾನುಭವಿಗಳಿಗೆ 80:20 ಅನುಪಾತದಲ್ಲಿ ವೆಚ್ಚ ಭರಿಸುವ ಷರತ್ತಿಗೆ ಒಳಪಟ್ಟು ಬಸ್ ಪಾಸ್ ವಿತರಿಸಲು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ನಂತರ, ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.**

## ವಿಷಯ ಸಂಖ್ಯೆ-04

**ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳು ಸ್ನಾತಕ್ಕೋತ್ತರ ಪದವಿ ವ್ಯಾಸಂಗಕ್ಕಾಗಿ ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮಾದರಿಯಲ್ಲಿ ಹೊರ ದೇಶಗಳಲ್ಲಿ ಸ್ನಾತಕ್ಕೋತ್ತರ ಪದವಿ ವಿದ್ಯಾಬ್ಯಾಸ ನಡೆಸಲು ವೆಚ್ಚವನ್ನು ಮಂಡಳಿಯಿಂದ ಭರಿಸುವ ಕುರಿತು.**

ಮಂಡಳಿಯ ನೋಂದಾಯಿತ ಕಾರ್ಮಿಕರ ಮಕ್ಕಳಿಗೆ ನರ್ಸರಿಯಿಂದ ಉನ್ನತ ಶಿಕ್ಷಣದವರೆಗೆ ವ್ಯಾಸಂಗ ಮಾಡುವ ಮಕ್ಕಳಿಗೆ ಪ್ರತಿವರ್ಷ ಶೈಕ್ಷಣಿಕ ಸಹಾಯಧನವನ್ನು ನೀಡುವ ಯೋಜನೆ ಜಾರಿಯಲ್ಲಿರುತ್ತದೆ. ಆದರೆ, ದುರ್ಬಲ ಆರ್ಥಿಕ ಸ್ಥಿತಿಯಿಂದ ಕಟ್ಟಡ ಕಾರ್ಮಿಕರ ಪ್ರತಿಭಾವಂತ ಮಕ್ಕಳು ಉನ್ನತ ಶಿಕ್ಷಣಕ್ಕಾಗಿ ಹೊರದೇಶಗಳಲ್ಲಿ ವಿಧ್ಯಾಬ್ಯಾಸ ಮಾಡುವುದು ಮರೀಚಿಕೆಯಾಗಿಯೇ ಉಳಿದಿರುತ್ತದೆ. ಹಾಗಾಗಿ, ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮಾದರಿಯಲ್ಲಿ ಮಂಡಳಿಯಲ್ಲಿ ನೋಂದಾಯಿತರಾಗಿರುವ ಕಾರ್ಮಿಕರ ಮಕ್ಕಳ ಪೈಕಿ ಉನ್ನತ ಶಿಕ್ಷಣಕ್ಕಾಗಿ ಹೊರದೇಶಗಳಲ್ಲಿ ವಿಧ್ಯಾಬ್ಯಾಸ ಮಾಡಲು ಇಚ್ಚಿಸುವ ಮಕ್ಕಳ ವಿಧ್ಯಾಬ್ಯಾಸದ ವೆಚ್ಚವನ್ನು ಮಂಡಳಿಯಿಂದಲೇ ಭರಿಸಿದ್ದಲ್ಲಿ ಅಂತಹ ಮಕ್ಕಳ ಭವಿಷ್ಯವನ್ನು ಉಜ್ವಲಗೊಳಿಸಲು ಅವಕಾಶವಿರುತ್ತದೆ.

ಮಂಡಳಿಯ 2021-22ನೇ ಸಾಲಿನ ಆಯವ್ಯಯದ ಶ್ರಮ ಸಂಸಾರ ಸಾಮರ್ಥ್ಯ ತರಬೇತಿ ಸೌಲಭ್ಯದಡಿ ನೋಂದಾಯಿತ ಕಾರ್ಮಿಕರ ಮಕ್ಕಳಿಗೆ UPSC, KPSC, (Preliminary & Mains), RRB, IBPS, SSC, Group 'C', ಹುದ್ದೆಗಳ ಪರೀಕ್ಷೆಗೆ ತರಬೇತಿ ನೀಡುವ ಕಾರ್ಯಕ್ರಮಕ್ಕೆ ಮೀಸಲಿಟ್ಟಿರುವ ರೂ.150.00 ಕೋಟಿಗಳ ಪೈಕಿ ಈ ಯೋಜನೆಗಾಗಿ ರೂ.75.00 ಕೋಟಿಗಳನ್ನು ಮೀಸಲಿಟ್ಟು ಅನುಷ್ಠಾನಮಾಡಲು ಅನುಮೋದನೆಗಾಗಿ ಮಂಡಿಸಿದರು.

**ತೀರ್ಮಾನ:**

ಕಾರ್ಮಿಕರ ಮಕ್ಕಳು ಉನ್ನತ ವಿದ್ಯಾಬ್ಯಾಸಕ್ಕಾಗಿ ಹೊರದೇಶದಲ್ಲಿ ವಿದ್ಯಾಬ್ಯಾಸ ಮಾಡುವಂತಹ ಮಕ್ಕಳಿಗೆ ವಿಧ್ಯಾಬ್ಯಾಸಕ್ಕಾಗಿ ತಗಲುವ ವೆಚ್ಚ ರೂ.20-25 ಲಕ್ಷಗಳ ಮೊತ್ತವನ್ನು ಭರಿಸುವ ಉದ್ದೇಶವನ್ನು ಹೊಂದಿದ್ದು. ಹೊರದೇಶಗಳಲ್ಲಿ ಒಮ್ಮೆ ಸ್ನಾತಕೋತ್ತರ ಪದವಿ ವಿದ್ಯಾಬ್ಯಾಸ ನಡೆಸಲು ತಗಲುವ ವೆಚ್ಚವನ್ನು ಮಂಡಳಿಯಿಂದ ಭರಿಸಲು ಹಾಗೂ ಈ ಬಗ್ಗೆ ಮಂಡಳಿ ಸೂಕ್ತ ಮಾರ್ಗಸೂಚಿಗಳನ್ನು ಮಾನ್ಯ ಅಧ್ಯಕ್ಷರ ಅನುಮೋದನೆಯೊಂದಿಗೆ ಹೊರಡಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

## ವಿಷಯ ಸಂಖ್ಯೆ-05

**ಮಂಡಳಿಯಿಂದ ಪ್ರಸ್ತುತ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ನೀಡುವ ಎಲ್‌ಪಿಜಿ ಗ್ಯಾಸ್ ಕನೆಕ್ಷನ್ ಸೌಲಭ್ಯವನ್ನು ರದ್ದುಪಡಿಸುವ ಕುರಿತು.**

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ನಿಯಮಾವಳಿಗಳು 2006 ರ ನಿಯಮ 49 (ಡಿ) ರಡಿಯಲ್ಲಿ ನೋಂದಾಯಿತ ಕಾರ್ಮಿಕರಿಗೆ ಉಚಿತವಾಗಿ ಎಲ್‌ಪಿಜಿ ಗ್ಯಾಸ್ ಒದಗಿಸುವ ಸೌಲಭ್ಯವನ್ನು ರೂಪಿಸಲಾಗಿರುತ್ತದೆ. ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ

ಇಲಾಖೆ ಇವರಿಗೆ ದಿನಾಂಕ 28-02-2018 ರಂದು ಮಂಡಳಿಯಿಂದ ರೂ.66.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ಈ ಇಲಾಖೆಯು ಮುಖ್ಯಮಂತ್ರಿಗಳ ಅನಿಲ ಭಾಗ್ಯ ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಗುರುತಿಸಿ, ಅದರಲ್ಲಿ ನೋಂದಾಯಿತ ಕಾರ್ಮಿಕರಿದ್ದಲ್ಲಿ ಅವರಿಗೆ ತಗಲುವ ವೆಚ್ಚವನ್ನು ಮಂಡಳಿಯಿಂದ ಬಿಡುಗಡೆ ಮಾಡಲಾದ ಮೊತ್ತದಿಂದ ಭರಿಸಲಾಗುತ್ತಿತ್ತು. ಅದರಂತೆ ಇದುವರೆಗೂ ಕೇವಲ 3733 ಮಂಡಳಿಯ ನೋಂದಾಯಿತ ಕಾರ್ಮಿಕರಿಗೆ ಗ್ಯಾಸ್ ಸೌಲಭ್ಯವನ್ನು ಒದಗಿಸಿರುತ್ತಾರೆ. ಹಾಗಾಗೀ ಉದ್ದೇಶಿತ ಗುರಿಯನ್ನು ತಲುಪಲು ಸಾಧ್ಯವಾಗದ ಕಾರಣ ದಿನಾಂಕ 09-01-2020 ರಂದು ರೂ.64.00 ಕೋಟಿಗಳನ್ನು ವಾಪಸ್ಸು ನೀಡಿರುತ್ತಾರೆ. ತದನಂತರ ಸದರಿ ಯೋಜನೆಯ ಅನುಷ್ಠಾನಗೊಳ್ಳದೇ ಸ್ಥಗಿತಗೊಂಡಿರುತ್ತದೆ.

ಅಲ್ಲದೆ, ಸರ್ಕಾರದ ವಿವಿಧ ಇಲಾಖೆಗಳಾದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆಗಳ ಮೂಲಕ ಗ್ಯಾಸ್ ಸೌಲಭ್ಯವನ್ನು ಒದಗಿಸುತ್ತಿರುತ್ತಾರೆ. ಹಾಗಾಗಿ, ಮಂಡಳಿಯಿಂದ ಪ್ರತ್ಯೇಕವಾಗಿ ಈ ಸೌಲಭ್ಯವನ್ನು ಒದಗಿಸುವ ಅವಶ್ಯಕತೆ ಕಂಡು ಬರುತ್ತಿರುವುದಿಲ್ಲ. ಆದಕಾರಣ ಸದರಿ ಯೋಜನೆಯ ನಿಯಮಗಳಲ್ಲಿ ತಿದ್ದುಪಡಿತರುವ ಮೂಲಕ ಈ ಯೋಜನೆಯನ್ನು ಕೈಬಿಡಬಹುದಾಗಿರುತ್ತದೆ ಎಂದು ಘಟನೋತ್ತರ ಅನುಮೋದನೆಗಾಗಿ ಮಂಡಿಸಿದರು.

**ತೀರ್ಮಾನ:**

**ಸಭೆಯು ಕೂಲಂಕಷವಾಗಿ ಚರ್ಚಿಸಿ, ಮಂಡಳಿಯಿಂದ ಪ್ರಸ್ತುತ ನೋಂದಾಯಿತ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ನೀಡುವ ಎಲ್‌ಪಿಜಿ ಗ್ಯಾಸ್ ಕನೆಕ್ಷನ್ ಸೌಲಭ್ಯವನ್ನು ರದ್ದುಪಡಿಸಲು ಸಭೆಯಲ್ಲಿ ಸರ್ವಾನುಮತದಿಂದ ಅನುಮೋದಿಸಿತು.**

## ವಿಷಯ ಸಂಖ್ಯೆ-06

**ಕೋವಿಡ್-19 ರ 2ನೇ ಅಲೆಯ ಹಿನ್ನಲೆಯಲ್ಲಿ ಘೋಷಿಸಲಾಗಿದ್ದ ಸಂಕಷ್ಟಕ್ಕೆ ಒಳಗಾದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಪರಿಹಾರವಾಗಿ ತಲಾ ರೂ.3000/- ಗಳ ಸಹಾಯ ಧನ, ಆಹಾರ ಸಾಮಾಗ್ರಿಗಳ ಕಿಟ್‌ಗಳು, ಸುರಕ್ಷಾ ಕಿಟ್‌ಗಳು ಹಾಗೂ ಇತರೆ ಕಿಟ್‌ಗಳನ್ನು ಒದಗಿಸಿದ ಬಾಬ್ತು ಮಂಡಳಿಯ ಸುಂಕ ನಿಧಿಯಿಂದ ಭರಿಸಲಾದ ವೆಚ್ಚ ರೂ.971.52 ಕೋಟಿಗಳಿಗೆ ಘಟನ್ನೋತ್ತರ ಅನುಮತಿ ನೀಡುವ ಕುರಿತು.**

ಕೋವಿಡ್-19ರ ಎರಡನೇ ಅಲೆ ಸಂದರ್ಭದಲ್ಲಿ ಸಂಕಷ್ಟಕ್ಕೆ ಒಳಗಾದ ನೋಂದಾಯಿತ ಕಟ್ಟಡ ಮತ್ತುಇತರೆ ನಿರ್ಮಾಣ ಕಾರ್ಮಿಕರಿಗೆ ಸರ್ಕಾರವು ವಿವಿಧ ಸೌಲಭ್ಯಗಳನ್ನು ಒದಗಿಸಲು ತಿಳಿಸಿರುತ್ತದೆ. ಅದರಂತೆ ನೋಂದಾಯಿತ ಕಾರ್ಮಿಕರಿಗೆ ತಲಾ ರೂ.3000/- ಗಳ ಪರಿಹಾರ, ಆಹಾರ ಸಾಮಗ್ರಿಗಳ ಕಿಟ್‌ಗಳು, ರಕ್ಷಣಾ ಮತ್ತು ನೈರ್ಮಲ್ಯೀಕರಣ ಕಿಟ್‌ಗಳು, ಇಮ್ಯೂನಿಟಿ ಬೂಸ್ಟರ್ ಕಿಟ್‌ಗಳು, ಕೋವಿಡ್ ಸಂಬಂಧ ಐಇಸಿ ಚಟುವಟಿಕೆಗಳನ್ನು ಕೈಗೊಳ್ಳಲು ಕಾರ್ಮಿಕ ಅಧಿಕಾರಿಗಳ ಕಛೇರಿಗಳಿಗೆ ಗರಿಷ್ಠ ರೂ.5.00 ಲಕ್ಷಗಳ ವರೆಗೆ ಅನುದಾನ ಬಿಡುಗಡೆ ಮತ್ತು ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಹೆಚ್ಚಾಗಿ ವಾಸಿಸುವ ಕಾಲೋನಿಗಳು ಮತ್ತು ಕೆಲಸ ನಿರ್ವಹಿಸುವ ಪ್ರದೇಶಗಳಲ್ಲಿ ಸ್ಯಾನಿಟೈಸ್ ಮಾಡಿಸಲಾಗಿರುತ್ತದೆ. ಈ ಎಲ್ಲಾ ಕಾರ್ಯಕ್ರಮಗಳಿಗಾಗಿ

ರೂ.971.52 ಕೋಟಿಯಷ್ಟು ಮೊತ್ತ ಖರ್ಚಾಗಿದ್ದು, ಈ ಮೊತ್ತವನ್ನು ಮಂಡಳಿಯ ಸುಂಕ ನಿಧಿಯಿಂಥ ಭರಿಸಲಾಗಿರುತ್ತದೆ.

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಕಾಇ 213 ಎಲ್ಇಟಿ 2021 ದಿನಾಂಕ 14-06-2021 ರನ್ವಯ ಅಸಂಘಟಿತ ವಲಯದ ಕಾರ್ಮಿಕರಿಗೆ ಆಹಾರ ಸಾಮಗ್ರಿ ಕಿಟ್‌ಗಳನ್ನು ವಿತರಿಸಲು ಮಂಡಳಿಯಿಂದ ಕ್ರಮಕೈಗೊಂಡು ಖರ್ಚಾಗುವ ಮೊತ್ತವನ್ನು ಮಂಡಳಿಯಿಂದ ಭರಿಸಿ, ತದನಂತರ ಸರ್ಕಾರದಿಂದ ಹಿಂಭರಿಸಿಕೊಳ್ಳುವಂತೆ ಸೂಚಿಸಿರುತ್ತದೆ. ಅದರಂತೆ ಅಸಂಘಟಿತ ಕಾರ್ಮಿಕರಿಗಾಗಿ ಒಟ್ಟು 3.80 ಲಕ್ಷ ಆಹಾರ ಸಾಮಗ್ರಿ ಕಿಟ್‌ಗಳನ್ನು ತಯಾರಿಸಿ ವಿತರಿಸಲು ಒಟ್ಟು 30.56 ಕೋಟಿ ಖರ್ಚಾಗಿದ್ದು ಈ ಮೊತ್ತವನ್ನು ಮಂಡಳಿಯಿಂದ ಭರಿಸಲಾಗಿರುತ್ತದೆ. ಅಲ್ಲದೆ, ಈ ಮೊತ್ತವನ್ನು ಸರ್ಕಾರದಿಂದ ಹಿಂಪಡೆಯಲು ಅಗತ್ಯ ಕ್ರಮಕೈಗೊಳ್ಳುವಂತೆ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಗೆ ತಿಳಿಸಲಾಗಿರುತ್ತದೆ.

ಆದಕಾರಣ ಕೋವಿಡ್-19ರ ಎರಡನೇ ಅಲೆ ಸಂದರ್ಭದಲ್ಲಿ ಕಟ್ಟಡ ಕಾರ್ಮಿಕರ ಕಲ್ಯಾಣಕ್ಕಾಗಿ ಖರ್ಚು ಮಾಡಿರುವ ವೆಚ್ಚಗಳಿಗೆ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದರು

ತೀರ್ಮಾನ:

ಮಂಡಳಿಯ ನೋಂದಾಯಿತ ಕಾರ್ಮಿಕರಿಗೆ ಜುಲೈ 05 ರಿಂದ ಸೆಪ್ಟಂಬರ್-05ರ ವರೆಗು ನೋಂದಾಯಿತ ಕಟ್ಟಡ ಕಾರ್ಮಿಕರಿಗೆ ತಲಾ ರೂ.3000/-ಗಳಂತೆ ಡಿ.ಬಿ.ಟಿ. ಮೂಲಕ ಜಮೆ ಮಾಡಲಾಗಿದ್ದು ಇವುಗಳಲ್ಲಿ ಬ್ಯಾಂಕ್ ಖಾತೆಗಳ ಸಂಖ್ಯೆಯೊಂದಿಗೆ ಆಧಾರ್ ಜೋಡಣೆ ಇಲ್ಲದವರಿಗೆ ಜಮೆಯಾಗದೆ ವಾಪಸ್ಸು ಬಂದಿರುತ್ತವೆ. ಆದ್ದರಿಂದ ಸರಿಪಡಿಸಿ ಸಲ್ಲಿಸಿದ್ದಲ್ಲಿ ಸದರಿ ಖಾತೆಗಳಿಗೆ ಜಮೆ ಮಾಡಲು ಮತ್ತು ಸಹಾಯಧನ ವಂಚಿತರಾದ ಕಾರ್ಮಿಕರಿಗೆ ಮತ್ತೊಮ್ಮೆ ಕಾಲಾವಕಾಶ ವಿಸ್ತರಿಸಲು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ನಂತರ ಸಭೆಯು ಸರ್ವಾನುಮತದಿಂದ ಅನುಮೋದನೆ ಸೂಚಿಸಿತು.

## ವಿಷಯ ಸಂಖ್ಯೆ-07

**ಮಂಡಳಿಯ ಕೆಲಸ ಕಾರ್ಯಗಳಿಗೆ ಅನುಕೂಲವಾಗಲು ಉಪ ಕಾರ್ಮಿಕ ಆಯುಕ್ತರು ಮತ್ತು ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಕಾರ್ಮಿಕ ಅಧಿಕಾರಿಗಳ ಕಛೇರಿಗಳಿಗೆ ದೈನಂದಿನ ಸಂವಹನ ಹಾಗೂ ವಿಡಿಯೋ ಕಾನ್ಫರೆನ್ಸ್‌ಗಳಿಗಾಗಿ ಇಂಟರ್‌ನೆಟ್ ಲೀಸ್ಡ್ ಲೈನ್ ಹಾಗೂ ನೆಟ್‌ವರ್ಕಿಂಗ್ ಸೌಲಭ್ಯ ಹಾಗೂ ವಾರ್ಷಿಕ ನಿರ್ವಹಣೆ ಒದಗಿಸುವ ಕುರಿತು**

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ಕಾರ್ಮಿಕರ ನೋಂದಣಿ ಮತ್ತು ಕ್ಲೈಂಗಳನ್ನು ಆನ್‌ಲೈನ್ ಮೂಲಕ ವಿಲೇವಾರಿ ಮಾಡಲಾಗುತ್ತಿದ್ದು, ಇದಕ್ಕಾಗಿ ಈಗಾಗಲೇ ಉಪ ಕಾರ್ಮಿಕ ಆಯುಕ್ತರು ಮತ್ತು ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಕಾರ್ಮಿಕ ಅಧಿಕಾರಿಗಳ ಕಛೇರಿಗಳಿಗೆ ಸಂವಹನ ಹಾಗೂ ವಿಡಿಯೋ ಕಾನ್ಫರೆನ್ಸ್‌ಗಳಿಗಾಗಿ ಕಂಪ್ಯೂಟರ್ ಮತ್ತು ಇತರೆ ಪರಿಕರಣಗಳನ್ನು ನೀಡಲಾಗಿದ್ದು, ಇದಕ್ಕಾಗಿ ಮಂಡಳಿಯ ಕೆಲಸ ಕಾರ್ಯಗಳಿಗಾಗಿ ಇಂಟರ್‌ನೆಟ್ ಲೀಸ್ಡ್ ಲೈನ್ ಹಾಗೂ ನೆಟ್‌ವರ್ಕಿಂಗ್ ಹಾಗೂ ವಾರ್ಷಿಕ ನಿರ್ವಹಣೆ ಕುರಿತು ಘಟನೋತ್ತರ ಅನುಮೋದನೆಗಾಗಿ ಮಂಡಿಸಿದರು

ತೀರ್ಮಾನ:

ಈ ಕುರಿತು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲಾಯಿತು. ಸದರಿ ಅಂಶವನ್ನು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

## ವಿಷಯ ಸಂಖ್ಯೆ-08

**ನೋಂದಾಯಿತರಲ್ಲದ ಒಬ್ಬ ಕಟ್ಟಡ ಕಾರ್ಮಿಕರ ಅವಲಂಭಿತರಿಗೆ ಅಪಘಾತ ಮರಣ ಪರಿಹಾರವನ್ನು ಬಿಡುಗಡೆ ಮಾಡಿರುವ ಕುರಿತು ಘಟನ್ನೋತ್ತರ ಅನುಮೋದನೆ ನೀಡುವ ಬಗ್ಗೆ ಹಾಗೂ ನೋಂದಾಯಿತರಲ್ಲದ 5 ಕಟ್ಟಡ ಕಾರ್ಮಿಕರು ಕಟ್ಟಡ ಕಾಮಗಾರಿ ಸ್ಥಳಗಳಲ್ಲಿ ಮೃತ ಪಟ್ಟಿದ್ದು, ಇವರ ಅವಲಂಭಿತರಿಗೆ ಅಪಘಾತ ಮರಣ ಪರಿಹಾರವನ್ನು ವಿತರಿಸಲು ಅನುಮೋದನೆ ನೀಡುವ ಕುರಿತು.**

ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅಪಘಾತ ಮರಣ ಪರಿಹಾರ ಒದಗಿಸುವ ಸಂಬಂಧ ಕಾಯ್ದೆ ಮತ್ತು ನಿಯಮಗಳಡಿ ಪ್ರಸ್ತುತ ಯಾವುದೇ ಪ್ರಾವಧಾನಗಳು ಮತ್ತು ನಿಯಮಗಳು ಇರುವುದಿಲ್ಲ. ಆದರೆ, ಈ ಹಿಂದೆ ಇಂತಹ ಪ್ರಕರಣಗಳಲ್ಲಿ ಪರಿಹಾರವನ್ನು ನೀಡಲು ಮಾನವೀಯತೆ ದೃಷ್ಟಿಯಿಂದ ಮಂಡಳಿಯು ಅನುಮೋದನೆ ನೀಡಿರುತ್ತಾರೆ. ಮಾನ್ಯ ಅಧ್ಯಕ್ಷರ ಅನುಮೋದನೆಯ ಮೇರೆಗೆ ರೂ.2,00,000/- ಗಳನ್ನು ಬಿಡುಗಡೆ ಮಾಡಿದ್ದು, ಈ ಕಳಕಂಡಂತೆ ಅರ್ಜಿಗಳಿಗೆ ಘಟನೋತ್ತರ ಅನುಮೋದನೆ ನೀಡಲು ಮಂಡಿಸಿದೆ.

<u>**ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅಪಘಾತ ಪರಿಹಾರ ನೀಡಿದ ವಿಶೇಷ ಪ್ರಕರಣಗಳ ಪಟ್ಟಿ**</u>

| ಕ್ರ. ಸಂ | ತನಿಖಾ ವರದಿ ಸಲ್ಲಿಸಿದ ಅಧಿಕಾರಿ | ಕಡತ ಸಂಖ್ಯೆ | ವಿಷಯ | ಮೃತಪಟ್ಟ ನೋಂದಾಯಿತರಲ್ಲ ದ ಕಟ್ಟಡ ಕಾರ್ಮಿಕರ ಹೆಸರು | ಮಂಡಳಿಯಿಂದ ತೆಗೆದುಕೊಂಡಕ್ರಮ |
|---|---|---|---|---|---|
| 1 | ಕಾರ್ಮಿಕ ನಿರೀಕ್ಷಕರು, ಸಿದ್ದಾಪುರ ವೃತ್ತ, ಸಿದ್ದಪುರ | ಸಂಖ್ಯೆ: ಕಕಾಮಂ/ ಅಪಘಾತ/ ಸಿಆರ್-6/2021-22 | ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರಾದ ಮಂಜುನಾಥ ಟಿ ನಾಯ್ಕ, ದಿ॥ ಮಂಜುನಾಥ ಟಿ ನಾಯ್ಕ, ಸಾ॥ ಘಟ್ಟಿಕೈ, ದೇವಿಸರಾ, ಸಿದ್ದಪುರ, ಉತ್ತರ ಕನ್ನಡ ಇವರು ಬಚ್ಚಲು ಮನೆಯ ಬಾಗಿಲನ್ನು ಕೀಳುತ್ತಿರುವಾಗ ಬಚ್ಚಲು ಮನೆಯ ಸ್ಲ್ಯಾಬ್ ಆಕಸ್ಮಿಕವಾಗಿ ಕುಸಿದು ಬಿದ್ದು ಮೃತಪಟ್ಟಿದ್ದು ದಾಖಲೆಗಳನ್ನು ಸಲ್ಲಿಸಿರುವ ಬಗ್ಗೆ. | ಮಂಜುನಾಥ ಟಿ ನಾಯ್ಕ (ಉತ್ತರಕನ್ನಡ) | ಮಾನ್ಯ ಅಧ್ಯಕ್ಷರ ಅನುಮೋದನೆಯ ಮೇರೆಗೆ ಚೆಕ್ ಸಂಖ್ಯೆ: 395536 ದಿನಾಂಕ:21-08-2021 ರೂ.2,00,000/- ಗಳನ್ನು ಮಂಡಳಿಯಿಂದ ಬಿಡುಗಡೆ ಮಾಡಲಾಗಿದೆ. |

ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅಪಘಾತ ಮರಣ ಪರಿಹಾರ ಒದಗಿಸುವ ಸಂಬಂಧ ಕಾಯ್ದೆ ಮತ್ತು ನಿಯಮಗಳಡಿ ಪ್ರಸ್ತುತ ಯಾವುದೇ ಪ್ರಾವಧಾನಗಳು ಮತ್ತು ನಿಯಮಗಳು ಇರುವುದಿಲ್ಲ. ಆದರೆ, ಈ ಹಿಂದೆ ಇಂತಹ ಪ್ರಕರಣಗಳಲ್ಲಿ ಪರಿಹಾರವನ್ನು ನೀಡಲು ಮಾನವೀಯತೆ ದೃಷ್ಟಿಯಿಂದ ಮಂಡಳಿಯ ಅಧ್ಯಕ್ಷರು ಹಾಗೂ ಮಾನ್ಯ ಕಾರ್ಮಿಕ ಸಚಿವರು ಸದರಿ ಪ್ರಕರಣಗಳಿಗೆ ಅನುಮೋದನೆ ನೀಡಿರುತ್ತಾರೆ. ಪ್ರಸ್ತುತ ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಅಪಘಾತ ಮರಣ ಕೋರಿ ಸುಮಾರು 5 ಅರ್ಜಿಗಳು ಸ್ವೀಕೃತಗೊಂಡಿದ್ದು ಅರ್ಜಿಗಳ ವಿವರ ಈ ಕಳಕಂಡಂತಿರುತ್ತದೆ.

## ನೋಂದಾಯಿತ ಕಟ್ಟಡ ಕಾರ್ಮಿಕರ ಅಪಘಾತ ಪ್ರಕರಣಗಳ ಪಟ್ಟಿ ಅನುಮೋದನೆಗಾಗಿ

| ಕ್ರ. ಸಂ | ತನಿಖಾ ವರದಿ ಸಲ್ಲಿಸಿದ ಅಧಿಕಾರಿ | ಕಡತ ಸಂಖ್ಯೆ | ವಿಷಯ | ಮೃತಪಟ್ಟ ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರ ಹೆಸರು |
|---|---|---|---|---|
| 1 | ಸಹಾಯಕ ಕಾರ್ಮಿಕ ಆಯುಕ್ತರು | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ್-5/2021-22 | ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರಾದ ದಿ॥ ಸುಮನ್ ಬಿನ್ ಲೇಟ್ ಪರಮೇಶ್ವರನ್ ಇವರು ಕೆಲಸದ ಸ್ಥಳದಲ್ಲಿ ಮೃತ ಪಟ್ಟಿರುವ ಪ್ರಕರಣದಲ್ಲಿ ಪರಿಹಾರಕ್ಕಾಗಿ ವಿವರವಾದ ವರದಿ ಸಲ್ಲಿಸಿರುವ ಬಗ್ಗೆ. | ಶ್ರೀ ಸುಮನ್‌ರಾಜ್ (ಬೆಂಗಳೂರು) |
| 2 | ಸಹಾಯಕ ಕಾರ್ಮಿಕ ಆಯುಕ್ತರು, ವಿಭಾಗ-4, ಬೆಂಗಳೂರು | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ್-7/2021-22 | ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರಾದ ವಿಜಯ್‌ಕುಮಾರ್ ಇವರು ನಿರ್ಮಾಣ ಹಂತದಒಂದು ಮನೆಯ ಪಕ್ಕದಲ್ಲಿ ಹಾದು ಹೋಗಿರುವ 11 ಕೆವಿ ವಿದ್ಯುತ್ ಲೈನ್ ಮೇಲೆ ಬಿದ್ದು ಮೃತಪಟ್ಟಿರುತ್ತಾರೆ. | ವಿಜಯಕುಮಾರ್ (ಬೆಂಗಳೂರು) |
| 3 | ಹಿರಿಯ ಕಾರ್ಮಿಕ ನಿರೀಕ್ಷಕರು 24ನೇ ವೃತ್ತ ಬೆಂಗಳೂರು | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ್-8/2021-22 | ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರಾದ ದಿ॥ ನರಸಿಂಹಲು ಇವರು ಶ್ರೀ ಸಮೀಉಲ್ಲಾ ನಂ.64, 2ನೇ ಮುಖ್ಯರಸ್ತೆ, 7ನೇ ಕ್ರಾಸ್, ಅಟ್ಟೂರು ಲೇ ಔಟ್, ಯಲಹಂಕ ಬೆಂಗಳೂರು ಇವರಿಗೆ ಸೇರಿದ ಎನ್ನಲಾದ ವಾಸ ಉದ್ದೇಶದ ಕಟ್ಟಡ ನಿರ್ಮಾಣ ಕಟ್ಟಡದ ಅಡಿಪಾಯಕ್ಕೆ ನೀರು ಹಾಕಲು ತೆರಳಿದಾಗ ಕಟ್ಟಡದ ಮನೆಯ ಪಕ್ಕದ ಮನೆಯವರಾದ ಶ್ರೀಮತಿ ಕ್ರಿಸ್ಟಿ ಎಂಬುವವರ ನಾಯಿಯು ಕುತ್ತಿಗೆಗೆ ಬಾಯಿ ಹಾಕಿ ಕಚ್ಚಿದ್ದರಿಂದ ತೀವ್ರವಾದ ರಕ್ತಸ್ರಾವವಾಗಿ ಮೃತಪಟ್ಟಿರುತ್ತಾರೆ. | ನರಸಿಂಹಲು (ರಾಯಚೂರು) |
| 4 | ಕಾರ್ಮಿಕ ಅಧಿಕಾರ ರಾಮನಗರ | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ್-9/2021-22 | ದಿನಾಂಕ:04-06-2021 ರಂದು ಸ್ಯಾನಿಟರಿ ಪೈಪ್‌ಕಾಮಗಾರಿ ಪೂರ್ಣಗೊಂಡಿದ್ದರಿಂದ ಸ್ಯಾನಿಟರಿ ಪೈಪ್ ಲೈನ್ ನನ್ನು ಚಾಲನೆಗೊಳಸಲು ಸ್ಯಾನಿಟರಿ ಪೈಪ್‌ಲೈನ್‌ನ ಮ್ಯಾನ್ ಹೋಲ್ನಲ್ಲಿ ಅಳವಡಿಸಿದ್ದ ತಡೆಗೋಡೆಯನ್ನು ತೆಗೆದು ಚಾಲನೆಗೊಳಸಲು ಮ್ಯಾನ್ ಹೋಲ್ನ ಮುಚ್ಚಳ ತೆಗೆದ ಸಮಯದಲ್ಲಿ ಮ್ಯಾನ್ ಹೋಲ್ನ ಆಳವು ಹೆಚ್ಚಾದ್ದರಿಂದ ಮಂಜುನಾಥ ಮ್ಯಾನ್ ಹೋಲ್ಗೆ ಇಳಿದು ತಡೆಗೋಡೆ ತೆಗೆಯುವ ಸಮಯದಲ್ಲಿ ಜ್ಞಾನತಪ್ಪಿ ಮ್ಯಾನ್ ಹೋಲ್ನಲ್ಲೆ ಬಿದ್ದು ಮೃತಪಟ್ಟಿರುತ್ತಾರೆ. | ಶ್ರೀ ಮಂಜುನಾಥ (ಬೆಂಗಳೂರು) |
| 5 | ಕಾರ್ಮಿಕ ಅಧಿಕಾರ ಶಿವಮೊಗ್ಗ | ಸಂಖ್ಯೆ:ಕಕಾಮಂ/ ಅಪಘಾತ/ಸಿಆರ್-10/2021-22 | ದಿನಾಂಕ:20-07-2020 ರಂದು ಸಾಗರ ಪಟ್ಟಣದ ಕೈಗಾರಿಕಾ ವಸಾಹತು ಪ್ರದೇಶದಲ್ಲಿ ವಿದ್ಯುತ್ ಲೈನ್ ಬದಲಾಯಿಸುವ ವೇಳೆ ಲೈನ್ ಮೇಲೆ ಹತ್ತಿ ವೈರ್‌ಕಟ್ ಮಾಡುತ್ತಾ ಕೆಲಸ ಮಾಡುತ್ತಿದ್ದಾಗ ವಿದ್ಯುತ್ ಪಾಸ್ ಆಗಿ ವಿದ್ಯುತ್ ಕಂಬದಲ್ಲಿಯೇ ಮೃತಪಟ್ಟಿರುತ್ತಾರೆ. | ಕಿರಣ (ಶಿವಮೊಗ್ಗ) |

ಸದರಿ ವಿಷಯವನ್ನು ಮಂಡಳಿಯ ಅವಗಾಹನೆ ಹಾಗೂ ಅನುಮೋದನೆಗಾಗಿ ಮಂಡಿಸಿದರು.

ತೀರ್ಮಾನ:

ಈ ಕುರಿತು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಲಾಯಿತು. ಸದರಿ ಅಂಶವನ್ನು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

## ವಿಷಯ ಸಂಖ್ಯೆ-09

**ಕಾರ್ಮಿಕರು ವಾಸಿಸುವ ಸ್ಥಳಗಳಲ್ಲಿ ಶುದ್ಧ ಕುಡಿಯುವ ನೀರು ಪೂರೈಸುವ ಸಂಬಂಧ ಮೆ॥ ಎಸ್.ಡಬ್ಲ್ಯೂ.ಎನ್ ವಾಟರ್ ಸಲ್ಯೂಷನ್ ಸಂಸ್ಥೆಯವರು ಸಲ್ಲಿಸಿರುವ ಪ್ರಸ್ತಾವನೆ ಕುರಿತು.**

ಮೆ॥ ಎಸ್‌ಡಬ್ಲ್ಯೂಎನ್ ವಾಟರ್ ಸಲ್ಯೂಷನ್ಸ್ ಸಂಸ್ಥೆಯವರು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಆರೋಗ್ಯದ ಹಿತದೃಷ್ಟಿಯಿಂದ ಕಾರ್ಮಿಕರು ವಾಸಿಸುತ್ತಿರುವ ಸ್ಥಳ/ಕಾಲೋನಿಗಳಲ್ಲಿ ಶುದ್ಧ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವುದಕ್ಕೆ ರೂ.4.50 ಲಕ್ಷ ವೆಚ್ಚದ ಪ್ರಸ್ತಾವನೆಯನ್ನು ಮಂಡಳಿಗೆ ಸಲ್ಲಿಸಿರುತ್ತಾರೆ.

ಪ್ರಸಕ್ತ ಸನ್ನಿವೇಶದಲ್ಲಿ ಕಾರ್ಮಿಕರ ಆರೋಗ್ಯ ಕಾಪಾಡುವುದು ಅತ್ಯವಶ್ಯಕವಾಗಿರುವುದರಿಂದ ಹಾಗೂ ಮೂಲಭೂತ ಸೌಕರ್ಯವಾದ ಕುಡಿಯುವ ನೀರು ಒದಗಿಸುವುದು ಆಧ್ಯ ಕರ್ತವ್ಯವಾಗಿರುತ್ತದೆ. ಈ ಹಿನ್ನಲೆಯಲ್ಲಿ ಮೆ॥ ಎಸ್‌ಡಬ್ಲ್ಯೂಎನ್ ವಾಟರ್ ಸಲ್ಯೂಷನ್ಸ್ ಸಂಸ್ಥೆಯವರು ಕಾರ್ಮಿಕರು ವಾಸಿಸುವ ಸ್ಥಳ/ಕಾಲೋನಿಗಳಿಗೆ ತೆರಳಿ ಅಧ್ಯಯನ ನಡೆಸಿ ವಿಸ್ತೃತ ವರದಿಯನ್ನು ಪಡೆದು, ಅದರ ಆಧಾರದ ಮೇಲೆ ಶುದ್ಧ ಕುಡಿಯುವ ನೀರು ಒದಗಿಸಲು ಯೋಜನೆಯನ್ನು ರೂಪಿಸಬಹುದಾಗಿರುತ್ತದೆ. ಸದರಿ ವಿಷಯವನ್ನು ಮಂಡಳಿಯ ಅವಗಾಹನೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದರು.

**ತೀರ್ಮಾನ:**

**ಈ ಕುರಿತು ಸಭೆಯಲ್ಲಿ ಕೂಲಂಕುಶವಾಗಿ ಚರ್ಚಿಸಿದ ನಂತರ ಕುಡಿಯುವ ನೀರಿನ ವ್ಯವಸ್ಥೆಯನ್ನು ನಗರ ಸ್ಥಳೀಯ ಸಂಸ್ಥೆಗಳು ನೋಡಿಕೊಳ್ಳುತ್ತಿರುವುದರಿಂದ ಸದರಿ ವಿಷಯವನ್ನು ಕೈಬಿಡಲು ನಿರ್ಣಯಿಸಲಾಯಿತು.**

## ವಿಷಯ ಸಂಖ್ಯೆ-10

**ಮಂಡಳಿಯ 2021-22ನೇ ಸಾಲಿನ ಆಯವ್ಯಯದಲ್ಲಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ರೂಪಿಸಲಾದ ಟೂಲ್ ಕಿಟ್ ಸಾಮಗ್ರಿಗಳನ್ನು ವಿತರಿಸುವ ಕುರಿತು ವಲಯವಾರು / ಜಿಲ್ಲಾವಾರು/ ವಿಭಾಗವಾರು/ ಪ್ರಾದೇಶಿಕವಾರು ಕೆಟಿಪಿಪಿ ನಿಯಮಾನುಸಾರ ಖರೀದಿಸಿ ವಿತರಿಸುವ ಕುರಿತು.**

ಮಂಡಳಿಯ 2021-22ನೇ ಸಾಲಿನ ಆಯವ್ಯಯದಲ್ಲಿ ಮಂಡಳಿಯ ಫಲಾನುಭವಿಗಳಿಗೆ ರೂಪಿಸಲಾಗಿರುವ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳ ಅನುಷ್ಠಾನಗೊಳಿಸಬೇಕಾಗಿರುತ್ತದೆ.

2020-21ನೇ ಸಾಲೀನ ಬಜೆಟ್ ನಲ್ಲಿ ಶ್ರಮ ಸಾಮರ್ಥ್ಯಯೋಜನೆಯಡಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ರೂ.40 ಕೋಟಿ ವೆಚ್ಚದಲ್ಲಿ ಪಡೆಯಲು ಬಜೆಟ್‌ನಲ್ಲಿ ಅವಕಾಶ ಕಲ್ಪಿಸಲಾಗಿತ್ತು ಮತ್ತು ಈ ಹಿಂದೆಯೂ ಸರ್ಕಾರ ಟೆಂಡರ್ ಮೂಲಕ ತೆಗೆದುಕೊಳ್ಳಲು ಅವಕಾಶ ಕಲ್ಪಿಸಿದ್ದರಿಂದ, 2020-21ನೇ ಸಾಲಿನಲ್ಲಿ ಟೂಲ್‌ಕಿಟ್‌ಗಳನ್ನು ಪಡೆದು ಕಾರ್ಮಿಕರ ನೋಂದಣಿಯ ಜೇಷ್ಠತೆಯ ಆಧಾರದ ಮೇಲೆ ವಿತರಿಸಲಾಗಿದೆ. ಈ ಕಿಟ್‌ಗಳನ್ನು ಪಡೆಯಲು ರಾಜ್ಯಾದ್ಯಂತ

ನೋಂದಾಯಿತ ಕಾರ್ಮಿಕರಿಂದ ಬೇಡಿಕೆ ಇರುವುದು ಕಂಡು ಬಂದಿರುತ್ತದೆ. ಪ್ರಸ್ತುತ, 2021-22 ಸಾಲಿನಲ್ಲಿ ಟೂಲ್‌ಕಿಟ್‌ಗಳಿಗಾಗಿ 400.00 ಕೋಟಿಗಳ ಅನುದಾನವನ್ನು ಟೂಲ್‌ಕಿಟ್‌ಗಳಿಗಾಗಿ ಮೀಸಲಿರಿಸಲಾಗಿದೆ.

ನೋಂದಾಯಿತ ಕಟ್ಟಡ ಕಾರ್ಮಿಕರ ಇತ್ತೀಚಿನ ನೊಂದಣಿಯ ವಿವರಗಳನ್ನು ಮಂಡಳಿಯ IT ವಿಭಾಗದಿಂದ ಪಡೆಯಲಾಗಿದೆ ಮತ್ತು ಜಿಲ್ಲಾವಾರು ವಿವಿಧ ವೃತ್ತಿಗಳಂತೆ ಸುಮಾರು 22,07,081 ಸಂಖ್ಯೆಯ ವೃತ್ತಿಗಳ ಕಾರ್ಮಿಕರನ್ನು ಪರಿಗಣಿಸಲಾಗಿದೆ.

ಹಾಗಾಗಿ, ಸದರಿ ಯೋಜನೆಯನ್ನು ಶೀಘ್ರವಾಗಿ ಅನುಷ್ಠಾನಗೊಳಿಸಲು ಟೂಲ್‌ಕಿಟ್/ ಇತರೆಕಿಟ್ / ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ಸಾಮಾಗ್ರಿಗಳನ್ನು ಹಂಚುವ ಸಂಬಂಧ ಪ್ರಸ್ತಾವನೆಗಳನ್ನು ವಲಯವಾರು /ಜಿಲ್ಲಾವಾರು/ ವಿಭಾಗವಾರು/ ಪ್ರಾದೇಶಿಕವಾರು ಖರೀದಿಸಿ ಸಂಬಂಧ ನಿಯಮಾನುಸಾರ ಖರೀದಿಸಿ ಹಂಚಿಕೆ ಮಾಡುವ ಕುರಿತು ಟೆಂಡರ್ ಕರೆಯಲು ಅನುಮೋದನೆಗೆ ಹಾಗೂ ಸಭೆಯ ನಿರ್ಣಯಕ್ಕೆ ಮಂಡಿಸಿದೆ. ಸದರಿ ವಿಷಯವನ್ನು ಮಂಡಳಿಯ ಅವಗಾಹನೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದರು.

**ತೀರ್ಮಾನ:**

**ಸದರಿ ಅಂಶವನ್ನು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. ಈ ಕುರಿತು ಸಭೆಯಲ್ಲಿ ಮಂಡಳಿಯ ಸದಸ್ಯರಾದ ಶ್ರೀ.ಪ್ರಕಾಶಂ ರವರು ಟೂಲ್ ಕಿಟ್ ಸಾಮಗ್ರಿಗಳನ್ನು ವಿತರಿಸುವ ಮುನ್ನ ಒಂದು ಸ್ಯಾಂಪಲ್ ಕಿಟ್‌ನ್ನು ಪರಿಶೀಲಿಸಲು ಅವಕಾಶ ಮಾಡಿಕೊಡುವಂತೆ ಕೋರಿದರು. ಅವಕಾಶ ನೀಡುವಂತೆ ಮಾನ್ಯ ಅಧ್ಯಕ್ಷರು ಸೂಚಿಸಿದರು.**

**ವಿಷಯ ಸಂಖ್ಯೆ-11**

**2021-22ನೇ ಸಾಲಿನ ಮಂಡಳಿಯ ಆಯವ್ಯಯದಲ್ಲಿ ನ್ಯೂಟ್ರಿಷನ್ ಕಿಟ್ ಖರೀದಿಸಲು ಮೀಸಲಿರಿಸಿದ ಅನುದಾನದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವ ಕುರಿತು**

ನೋಂದಾಯಿತ ಕಾರ್ಮಿಕರು ಹಾಗೂ ಅವರ ಅವಲಂಭಿತರ ಪೈಕಿ 06 ತಿಂಗಳೊಳಗಿನ ಮಕ್ಕಳಿಗೆ ಹಾಲುಣಿಸುತ್ತಿರುವ ತಾಯಂದಿರಿಗೆ ನ್ಯೂಟ್ರಿಷನ್ ಆಹಾರ ಒದಗಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲು ನ್ಯೂಟ್ರಿಷನ್ ಕಿಟ್‌ನಲ್ಲಿರಬಹುದಾದ ಸಾಮಗ್ರಿಗಳ ವಿವರಗಳನ್ನು ನಿರ್ದೇಶಕರು, ಆಯುಷ್ ನಿರ್ದೇಶನಾಲಯ ಇವರಿಂದ ಪಡೆದಿರುವ ವರದಿಯಲ್ಲಿರುವ ಸಾಮಗ್ರಿಗಳನ್ನು ವಿತರಿಸಲು ಸಭೆಯಲ್ಲಿ ಪ್ರಸ್ತಾಪಿಸಲಾಯಿತು.

2021-22ನೇ ಸಾಲಿನ ಮಂಡಳಿಯ ಆಯುವ್ಯಯದಲ್ಲಿ ನ್ಯೂಟ್ರಿಷನ್ ಮತ್ತು ಇಮ್ಯೂನಿಟಿ ಬೂಸ್ಟ್‌ರ್‌ಕಿಟ್ ಯೋಜನೆ ಅನುಷ್ಠಾನಕ್ಕಾಗಿ ರೂ.150.00 ಕೋಟಿಗಳನ್ನು ಮೀಸಲಿಟ್ಟು ಸರ್ಕಾರದಿಂದ ಅನುಮೋದನೆಯನ್ನು ಪಡೆಯಲಾಗಿರುತ್ತದೆ.

ಮೇಲ್ಕಂಡ ಸಾಮಗ್ರಿಗಳನ್ನು ಒಳಗೊಂಡ ನ್ಯೂಟ್ರಿಷನ್ ಕಿಟ್‌ಅನ್ನು ನೋಂದಾಯಿತ ಕಾರ್ಮಿಕರು ಹಾಗೂ ಅವರ ಅವಲಂಭಿತರ ಪೈಕಿ 06 ತಿಂಗಳೊಳಗಿನ ಮಕ್ಕಳಿಗೆ ಹಾಲುಣಿಸುತ್ತಿರುವ ತಾಯಂದಿರಿಗೆ

ಒದಗಿಸಲು ಪ್ರಾದೇಶಿಕವಾರು ಖರೀದಿಸಿ ವಿತರಿಸುವ ಹಾಗೂ ಸರ್ಕಾರದಿಂದ ಕೆಟಿಪಿಪಿ ಕಾಯ್ದೆ 1999ರ ಕಲಂ 4(ಎ) ರಡಿ ವಿನಾಯಿತಿ ಪಡೆದು ಅನುಷ್ಠಾನಗೊಳಿಸಬಹುದಾಗಿರುತ್ತದೆ ಎಂದು ಮಂಡಳಿಯ ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು. ಆಗ ಮಂಡಳಿಯ ಸದಸ್ಯರು ಮಾತನಾಡಿ 06 ತಿಂಗಳೊಳಗಿನ ಮಕ್ಕಳಿಗೆ ಹಾಲುಣಿಸುತ್ತಿರುವ ತಾಯಂದರಿಗೆ ನ್ಯೂಟ್ರಿಷನ್ ಕಿಟ್‌ಗಳನ್ನು ಒದಗಿಸುವುದರ ಜೊತೆಗೆ ಎಲ್ಲಾ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಮಹಿಳಾ ಕಾರ್ಮಿಕರಿಗೆ ಪೌಷ್ಠಿಕಾಂಶ ಭರಿತ ಪದಾರ್ಥಗಳನ್ನು ಒಳಗೊಂಡ ಕಿಟ್‌ಗಳನ್ನು ನೀಡಿದ್ದಲ್ಲಿ ಅನುಕೂಲವಾಗಲಿದೆ ಎಂದು ತಿಳಿಸಿದರು.

**ತೀರ್ಮಾನ:**

**ಈ ಕುರಿತು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ನಂತರ 06 ತಿಂಗಳೊಳಗಿನ ಮಕ್ಕಳಿಗೆ ಹಾಲುಣಿಸುತ್ತಿರುವ ತಾಯಂದರಿಗೆ ನ್ಯೂಟ್ರಿಷನ್ ಕಿಟ್‌ಗಳನ್ನು ನೀಡುವುದರ ಜೊತೆಗೆ ಅಪೌಷ್ಠಿಕತೆಯಿಂದ ಬಳಲುತ್ತಿರುವ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಮಹಿಳಾ ಕಾರ್ಮಿಕರಿಗೂ ನ್ಯೂಟ್ರಿಷನ್ ಕಿಟ್‌ಗಳನ್ನು ನೀಡಲು ತೀರ್ಮಾನಿಸಿ ಕಿಟ್‌ನಲ್ಲಿರಬಹುದಾದ ಸಾಮಾಗ್ರಿಗಳು ಮತ್ತು ಅಂದಾಜು ದರಗಳ ಮಾಹಿತಿಯನ್ನು ಆಯುಷ್ ಇಲಾಖೆಯವರಿಂದ ಪಡೆದು, ಅದರಂತೆ ಕೆಟಿಪಿಪಿ ಕಾಯ್ದೆ 1999 ರ ಕಲಂ 4(ಎ) ರಡಿ ಪ್ರಾದೇಶಿಕವಾರು ವಿತರಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಅನುಮೋದನೆ ಪಡೆದು ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.**

## ವಿಷಯ ಸಂಖ್ಯೆ-12

**2021-22ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವ 100 ಶಿಶುಪಾಲನಾ ಕೇಂದ್ರಗಳನ್ನು ಸ್ಥಾಪಿಸುವ ಯೋಜನೆಯನ್ನು ಪ್ರಾದೇಶಿಕವಾರು ಅನುಷ್ಠಾನಗೊಳಿಸುವ ಕುರಿತು**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2021-22ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ನೋಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳ ಸಂರಕ್ಷಣೆಗಾಗಿ ಪ್ರಸಕ್ತ ಸಾಲಿನಲ್ಲಿ ಹೆಚ್ಚುವರಿಯಾಗಿ 100 ಕಿತ್ತೂರು ರಾಣಿ ಚೆನ್ನಮ್ಮ ಶಿಶುಪಾಲನಾ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದು ಘೋಷಣೆ ಮಾಡಿರುತ್ತಾರೆ. ಈ ಸಂಬಂಧ ಸರ್ಕಾರದ ಆದೇಶ ಸಂಖ್ಯೆ:ಕಾಇ 205 ಎಲ್‌ಇಟಿ 2021,ದಿನಾಂಕ:14-07-2021 ರನ್ವಯ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತದೆ.

ಮಂಡಳಿಯು ಅದರಂತೆ ನೋಂದಾಯಿತ ಕಾರ್ಮಿಕರ ಸಂಖ್ಯೆಗೆ ಅನುಗುಣವಾಗಿ ಪ್ರಾದೇಶಿಕವಾರು ಶಿಶುಪಾಲನಾ ಕೇಂದ್ರಗಳ ಸ್ಥಾಪನೆಯ ವಿವರವನ್ನು ಸಿದ್ಧಪಡಿಸಲಾಗಿರುತ್ತದೆ. ಅದರಂತೆ, ಬೆಂಗಳೂರು ಪ್ರಾದೇಶಿಕ-01ರ ವ್ಯಾಪ್ತಿಯಲ್ಲಿ 22 ಶಿಶುಪಾಲನಾ ಕೇಂದ್ರಗಳನ್ನು, ಬೆಂಗಳೂರು ಪ್ರಾದೇಶಿಕ-02ರ ವ್ಯಾಪ್ತಿಯಲ್ಲಿ 15 ಶಿಶುಪಾಲನಾ ಕೇಂದ್ರಗಳನ್ನು, ಕಲಬುರಗಿ ಪ್ರಾದೇಶಿಕ ವ್ಯಾಪ್ತಿಯಲ್ಲಿ 20 ಶಿಶುಪಾಲನಾ ಕೇಂದ್ರಗಳನ್ನು, ಹಾಸನ ಪ್ರಾದೇಶಿಕ ವ್ಯಾಪ್ತಿಯಲ್ಲಿ 15 ಶಿಶುಪಾಲನಾ ಕೇಂದ್ರಗಳನ್ನು ಮತ್ತು ಬೆಳಗಾವಿ ಪ್ರಾದೇಶಿಕ ವ್ಯಾಪ್ತಿಯಲ್ಲಿ 28 ಶಿಶುಪಾಲನಾ ಕೇಂದ್ರಗಳನ್ನು ಸ್ಥಾಪಿಸಬಹುದಾಗಿರುತ್ತದೆ.

ಪ್ರತಿ ಶಿಶುಪಾಲನಾ ಕೇಂದ್ರದ ನಿರ್ವಹಣೆಗೆ ತಗಲುವ ವಾರ್ಷಿಕ ವೆಚ್ಚವನ್ನು ರೂ.17.56 ಲಕ್ಷವೆಂದು ತಿಳಿಸಿ ಐಟಂವಾರು ವೆಚ್ಚದ ವಿವರಗಳನ್ನು ಈಗಾಗಲೇ ಆಯುಕ್ತರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ದಿನಾಂಕ:12-11-2020 ರಂದು ಮಂಡಳಿಗೆ ಸಲ್ಲಿಸಿರುತ್ತಾರೆ. ಈ ದರಗಳನ್ವಯ ಈಗಾಗಲೇ 2020-21ನೇ ಸಾಲಿನಲ್ಲಿ 100 ಶಿಶುಪಾಲನಾ ಕೇಂದ್ರಗಳನ್ನು ತೆರೆಯಲಾಗಿರುತ್ತದೆ. ಅಲ್ಲದೇ, ಮಂಡಳಿಯ 2021-22ನೇ ಸಾಲಿನ ಆಯವ್ಯಯದಲ್ಲಿ ಶಿಶುಪಾಲನಾ ಕೇಂದ್ರಗಳ ಸ್ಥಾಪನೆಗಾಗಿ ರೂ.40.00 ಕೋಟಿ ಅನುದಾನವನ್ನು ಮೀಸಲಿಟ್ಟು ದಿನಾಂಕ:18-02-2021 ರಂದು ನಡೆದ ಮಂಡಳಿಯ 32ನೇ ಸಭೆಯಲ್ಲಿ ಅನುಮೋದನೆಯನ್ನು ಪಡೆದುಕೊಳ್ಳಲಾಗಿರುತ್ತದೆ.

ಆದಕಾರಣ, 2021-22ನೇ ಸಾಲಿನಲ್ಲಿ ಘೋಷಿತವಾದ 100 ಶಿಶುಪಾಲನಾ ಕೇಂದ್ರಗಳನ್ನು ತೆರೆಯಲು ಪ್ರಾದೇಶಿಕವಾರು ಇ-ಟೆಂಡರ್ ಕರೆದು ಅರ್ಹ ಸಂಸ್ಥೆಯನ್ನು ಆಯ್ಕೆ ಮಾಡಿಕೊಳ್ಳಬಹುದಾಗಿರುತ್ತದೆ. ಸದರಿ ವಿಷಯವನ್ನು ಮಂಡಳಿಯ ಅವಗಾಹನೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದರು.

ತೀರ್ಮಾನ:

ಈ ಕುರಿತು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ನಂತರ ಮಂಡಳಿಯ ಅಧ್ಯಕ್ಷರು ಇದು 2021-22ನೇ ಸಾಲಿನ ಸನ್ಮಾನ್ಯ ಮುಖ್ಯಮಂತ್ರಿಗಳ ಆಯವ್ಯಯ ಘೋಷಣೆಯ ಕಾರ್ಯಕ್ರಮವಾಗಿರುತ್ತದೆ ಎಂದು ತಿಳಿಸಿದರು. ಅದಕ್ಕೆ ಸಭೆಯು ಪ್ರಾದೇಶಿಕವಾರು ಟೆಂಡರ್ ಕರೆದು ಅನುಷ್ಠಾನಗೊಳಿಸಲು ಅನುಮೋದನೆ ನೀಡಿತು.

## ವಿಷಯ ಸಂಖ್ಯೆ-13

**ಕಲ್ಯಾಣ ಮತ್ತು ಸುಂಕ ಆಯುಕ್ತರು, ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯ ಭಾರತ ಸರ್ಕಾರ ಇವರ ವ್ಯಾಪ್ತಿಯಲ್ಲಿ ಬರುವ 28 ಹೊರರೋಗಿ ಆಸ್ಪತ್ರೆ ಮತ್ತು 2 ಒಳರೋಗಿ ಆಸ್ಪತ್ರೆಗಳಲ್ಲಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಉಚಿತ ಚಿಕಿತ್ಸೆ ಪಡೆಯಲು ಅವಕಾಶ ಕಲ್ಪಿಸುವ ಕುರಿತು**

ಕಲ್ಯಾಣ ಮತ್ತು ಸುಂಕ ಆಯುಕ್ತರು, ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯ ಭಾರತ ಸರ್ಕಾರ ಇವರ ಕಛೇರಿ ಪತ್ರ ಸಂಖ್ಯೆ: 26(40)ಇ/ಬಿಸಿಡಬ್ಲ್ಯೂ/10-11/2981, ದಿನಾಂಕ: 02-07-2021 ರನ್ವಯ ಮಂಡಳಿಗೆ ಸಲ್ಲಿಸಿರುವ ಪತ್ರದಲ್ಲಿ ಈ ಸಂಸ್ಥೆಗೆ ಒಳಪಟ್ಟ ರಾಜ್ಯದದ್ಯಾಂತ 28 ಹೊರರೋಗಿ ಆಸ್ಪತ್ರೆ ಮತ್ತು 2 ಒಳರೋಗಿ ಆಸ್ಪತ್ರೆಗಳಿದ್ದು, ಈ ಸದರಿ ಆಸ್ಪತ್ರೆಗಳಲ್ಲಿ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಮತ್ತು ಅವರ ಅವಲಂಭಿತರಿಗೆ ಕೂಡ ಉಚಿತ ಚಿಕಿತ್ಸೆ ಪಡೆಯಲು ಅವಕಾಶ ಕಲ್ಪಿಸುವಂತೆ ಪ್ರಸ್ಥಾವನೆ ಸಲ್ಲಿಸಿರುತ್ತಾರೆ. ಸದರಿ ವಿಷಯವನ್ನು ಮಂಡಳಿಯ ಅವಗಾಹನೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದರು.

ತೀರ್ಮಾನ:

ಈ ಕುರಿತು ಸಭೆಯಲ್ಲಿ ಚರ್ಚಿಸಿದ ನಂತರ ಅನುಮೋದನೆ ನೀಡಲಾಯಿತು ಹಾಗೂ ಕರ್ನಾಟಕ ರಾಜ್ಯದಲ್ಲಿ ಕೇಂದ್ರ ಸರ್ಕಾರದ ಅಧೀನದಲ್ಲಿರುವ ಇಎಸ್ಐ ಕಾರ್ಪರೇಷನ್ ಕರ್ನಾಟಕ ರಾಜ್ಯ ವಿಮಾ ನಿಗಮದ ಎರಡು ಆಸ್ಪತ್ರೆಗಳಿದ್ದು ಬೆಂಗಳೂರಿನ ರಾಜಾಜಿನಗರ ಮತ್ತು ಕಲಬುರಗಿಯಲ್ಲಿ ಕಾರ್ಯನಿರ್ವಹಿಸುತ್ತಿರುತ್ತವೆ. ಕರ್ನಾಟಕ ರಾಜ್ಯ ವಿಮಾ ನಿಗಮದ ವೈದ್ಯಕೀಯ ಸೇವೆಗಳ ಅಡಿಯಲ್ಲಿ 7 ಆಸ್ಪತ್ರೆಗಳು ಹಾಗೂ 113 **Dispencery** ಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಸದರಿ ಆಸ್ಪತ್ರೆಗಳಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಹಾಗೂ ಅವರ ಅವಲಂಭಿತರಿಗೆ ವೈದ್ಯಕೀಯ ಸೌಲಭ್ಯ ಒದಗಿಸಲು ಪ್ರಸ್ತಾವನೆಯನ್ನು ಸಲ್ಲಿಸುವಂತೆ ತಿಳಿಸಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

## ವಿಷಯ ಸಂಖ್ಯೆ-14

**2020-21ನೇ ಸಾಲಿನ ಅನುಮೋದಿತ ಯೋಜನೆಯಾದ ನೋಂದಾಯಿತ ಕಾರ್ಮಿಕರ ಮಕ್ಕಳಿಗೆ ವಿವಿಧ ಸ್ಪರ್ಧಾತ್ಮಕ ಪರೀಕ್ಷಗಳಿಗೆ ತರಭೇತಿ ನೀಡಲು ಸಂಸ್ಥೆಗಳನ್ನು ಆಯ್ಕೆಮಾಡಿಕೊಂಡು ಎಂಪ್ಯಾನೆಲ್ ಮಾಡಿಕೊಂಡಿರುವ ಕುರಿತು ಮತ್ತು 2021-22ನೇ ಸಾಲಿನಲ್ಲಿ ಸದರಿ ಯೋಜನೆಗೆ ಮೀಸಲಿಟ್ಟಿರುವ ಅನುದಾನದಂತೆ ಯೋಜನೆಯನ್ನು ಜಾರಿಗೊಳಿಸುವ ಕುರಿತು**

ಮಂಡಳಿ ಶ್ರಮ ಸಂಸಾರ ಸಾಮರ್ಥ ಯೋಜನೆ ಯಡಿಯಲ್ಲಿ 2020-21ನೇ ಸಾಲಿನಲ್ಲಿ ನೋಂದಾಯಿತ ಕಾರ್ಮಿಕರ ಮಕ್ಕಳಿಗೆ UPSC, KPSC, (Preliminary & Mains), RRB, IBPS, SSC, Group 'C', ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಸ್ಥೆಗಳನ್ನು ಆಯ್ಕೆ ಮಾಡಲು ಮಂಡಳಿಯಲ್ಲಿ ಎಕ್ಸ್‌ಪ್ರೆಷನ್ ಆಫ್ ಇಂಟ್ರಸ್ಟ್ ಕರೆಯಲಾಗಿತ್ತು. ಅದರಲ್ಲಿ 13 ಸಂಸ್ಥೆಗಳು ಆಯ್ಕೆಗೊಂಡಿದ್ದು, ಅವುಗಳಲ್ಲಿ ಈ ಕೆಳಕಂಡ 05 ಸಂಸ್ಥೆಗಳು ಮಾತ್ರ ಅರ್ಹತೆ ಹೊಂದಿದ್ದು, ಎಂಪ್ಯಾನೆಲ್ ಮಾಡಿಕೊಳ್ಳಲಾಗುತ್ತಿದೆ.

1. CfBT Educational Services, Hyderabad.
2. Universal Coaching Centre, Bengaluru.
3. Sahara, Bengaluru.
4. JICE Academy for Excellence Pvt. Ltd, Bengaluru.
5. Shaheen Educational Trust, Bengaluru.

2020-21ನೇ ಸಾಲಿನಲ್ಲಿ ಒಟ್ಟು 800 ಮಕ್ಕಳಿಗೆ ಉಚಿತ ತರಬೇತಿ ಒದಗಿಸಲು ಉದ್ದೇಶಿಸಿದ್ದು ಮೇಲ್ಕಂಡ ಸಂಸ್ಥೆಗಳಿಗೆ ಗುರಿಯನ್ನು ನಿಗಧಿ ಪಡಿಸಬೇಕಿರುತ್ತದೆ.

ಮುಂದುವರೆದು, 2021-22ನೇ ಸಾಲಿನಲ್ಲಿ ಸದರಿ ಯೋಜನೆಯಡಿ UPSC, KPSC, JEE, NEET, CET, RRB, IBPS, SSC, Group 'B' & 'C' ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡಲು ಉದ್ದೇಶಿಸಿ ಇದಕ್ಕಾಗಿ ಒಟ್ಟು 150.00 ಕೋಟಿಗಳಷ್ಟು ಅನುದಾನವನ್ನು ಮೀಸಲಿಡಲಾಗಿರುತ್ತದೆ. ಈ ಮೇಲೆ ತಿಳಿಸಿರುವ ಸಂಸ್ಥೆಗಳ ಮೂಲಕ 2021-22ನೇ ಸಾಲಿನಲ್ಲಿ ಮೀಸಲಿರಿಸಿದ ಅನುದಾನದಲ್ಲಿ ರೂ.75.00 ಕೋಟಿ ಮೊತ್ತಕ್ಕೆ ಪರಿಷ್ಕರಿಸಿ ನಿಗಧಿಪಡಿಸಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಸಂಸ್ಥೆಗಳಿಗೆ ಗುರಿ ಮತ್ತು ಸ್ಥಳಗಳನ್ನು ನಿಗಧಿ ಪಡಿಸಿ ಜಾರಿಗೊಳಿಸಬೇಕಾಗಿರುತ್ತದೆ.

ಮುಂದುವರೆದು, ವಿಧ್ಯಾರ್ಥಿಗಳು ಪದವಿ ವಿದ್ಯಾಭ್ಯಾಸ ಮಾಡುವ ಸಮಯದಲ್ಲಿಯೇ ಅದರ ಪಠ್ಯಕ್ರಮಗಳ ಜೊತೆಗೆ ಐ.ಎ.ಎಸ್ / ಕೆ.ಎ.ಎಸ್ ತರಬೇತಿ ಮುಗಿದ ತಕ್ಷಣ ಅರ್ಹ ಉದ್ಯೋಗಗಳಿಗೆ ಸೇರಲು ಇಚ್ಚಿಸುತ್ತಾರೆ. ಹಾಗಾಗಿ, ಅವರ ಉದ್ಯೋಗಕ್ಕೆ ಅನುಕೂಲವಾಗುವಂತೆ ಮಂಡಳಿಯ ನೋಂದಾಯಿತ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ ಪದವಿ ವಿದ್ಯಾಭ್ಯಾಸಕ್ಕೆ ಹೆಚ್ಚುವರಿಯಾಗಿ ಐ.ಎ.ಎಸ್/ ಕೆ.ಎ.ಎಸ್ ಪರೀಕ್ಷಾ ಪೂರ್ವ ತರಬೇತಿಯೊಂದಿಗೆ Integrated Course ಅನ್ನು ಆಯ್ದ ಸಂಸ್ಥೆಗಳಿಂದ ತರಬೇತಿ ನೀಡಬಹುದಾಗಿರುತ್ತದೆ. ಸದರಿ ವಿಷಯವನ್ನು ಮಂಡಳಿಯ ಅವಗಾಹನೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದರು.

**ತೀರ್ಮಾನ:**

**ಈ ಕುರಿತು ಸಭೆಯಲ್ಲಿ ಕೂಲಂಕಷವಾಗಿ ಚರ್ಚಿಸಿದ ನಂತರ UPSC, KPSC, JEE, NEET, CET, RRB, IBPS, SSC, Group 'B' & 'C' ಹುದ್ದೆಗಳ ತರಬೇತಿ ನೀಡಲು ಅರ್ಹ**

ಸಂಸ್ಥೆಗಳನ್ನು ಎಂಪ್ಯಾನೆಲ್ ಮಾಡಲು ಸಭೆಯು ಅನುಮೋದನೆ ನೀಡಿತು. ಆದರೆ, Integrated Course ಅನ್ನು ಆಯ್ದೆ ಸಂಸ್ಥೆಗಳಿಂದ ತರಬೇತಿ ನೀಡುವ ಬಗ್ಗೆ ಮುಂದೂಡಲು ತೀರ್ಮಾನಿಸಲಾಯಿತು.

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

- ಬೆಳಗಾವಿ ಜಿಲ್ಲೆಯ ಬಿ.ಕೆ ಕಂಗ್ರಾಳ ಕೈಗಾರಿಕಾ ಪ್ರದೇಶದಲ್ಲಿ 03 ಎಕರೆ ಜಾಗದಲ್ಲಿ ಕಾಂಪೌಂಡ್ ಅನ್ನು ನಿರ್ಮಿಸಿದ್ದು, ವಸತಿ ಸಮುಚ್ಛಯಗಳು, ಕಛೇರಿ ಹಾಗೂ ರಸ್ತೆ ಇವುಗಳನ್ನು ಒಟ್ಟಾರೆಯಾಗಿ ನಿರ್ಮಿಸಲು ಡಿಪಿಆರ್ ಯೋಜನೆ ವರದಿಯನ್ನು ತಯಾರಿಸಲಾಗುತ್ತಿದೆ ಎಂಬ ವಿಷಯವನ್ನು ಮಾನ್ಯ ಅಧ್ಯಕ್ಷರು ಸಭೆಗೆ ಮಂಡಿಸಿದರು.
- ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ 2016-17, 2017-18, 2018-19 ಮತ್ತು 2019-20ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಸಭೆಯಲ್ಲಿ ಮಂಡಿಸಲಾಯಿತು , ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.
- ರಾಜ್ಯದಲ್ಲಿ ಅತಿವೃಷ್ಟಿ/ಅನಾವೃಷ್ಟಿ ಹಾಗೂ ತುರ್ತು ಪರಿಸ್ಥಿತಿ ಉಂಟಾಗಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು ಮತ್ತು ಅವರ ಅವಲಂಬಿತರು ಸಂಕಷ್ಟಕ್ಕೊಳಗಾದಲ್ಲಿ ಆಹಾರ ಮತ್ತು ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಕ್ರಮವಹಿಸಲು ಅಧ್ಯಕ್ಷರ ಅನುಮೋದನೆಯೊಂದಿಗೆ ಮಂಡಳಿಯ ಕಾರ್ಯದರ್ಶಿಗಳಿಗೆ ಅಧಿಕಾರ ನೀಡಲಾಯಿತು. ಇಂತಹ ಸಂದರ್ಭಗಳಲ್ಲಿ ಉಂಟಾದ ಖರ್ಚುವೆಚ್ಚಗಳನ್ನು ಮಂಡಳಿಯ ಮುಂದಿನ ಸಭೆಯಲ್ಲಿ ಮಂಡಿಸಿ ಘಟನೋತ್ತರ ಅನುಮೋದನೆ ಪಡೆಯಲು ಸರ್ವಾನುಮತದಿಂದ ಸಭೆಯಲ್ಲಿ ಒಪ್ಪಿ ತೀರ್ಮಾನಿಸಲಾಯಿತು.
- ಕಾರ್ಮಿಕ ಇಲಾಖೆಯು ಸ್ವಂತ ಕಟ್ಟಡಗಳನ್ನು ಹೊಂದಿರುವ ಬೆಂಗಳೂರಿನ ಬಗಲಗುಂಟೆ, ಮಂಗಳೂರು, ಹುಬ್ಬಳ್ಳಿ, ಕಲಬುರಗಿ, ಬೆಳಗಾವಿ ಮತ್ತು ಇತರೆ ಲಭ್ಯವಿರುವ ಮಂಡಳಿಯ ಕಟ್ಟಡಗಳ ಮೇಲೆ ಮಂಡಳಿಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅನುಕೂಲವಾಗುವಂತೆ ಸೋಲಾರ್ ಹಾಗೂ ಸದರಿ ಕಛೇರಿಗಳಿಗೆ Internet, Video Conference (VC) ಸೌಲಭ್ಯಗಳನ್ನು ಅಳವಡಿಸಲು ಸರ್ವಾನುಮತದಿಂದ ಸಭೆಯಲ್ಲಿ ಒಪ್ಪಿ ತೀರ್ಮಾನಿಸಲಾಯಿತು.
- ಮಂಡಳಿಯ 33ನೇ ಸಭೆಯಲ್ಲಿ ಮೈಸೂರು, ತುಮಕೂರು, ಕಲಬುರಗಿ, ಮಂಡ್ಯ ಹಾವೇರಿ, ಉತ್ತರಕನ್ನಡ ಮತ್ತು ಹಾಸನ ಜಿಲ್ಲೆಗಳಲ್ಲಿ ಹೊಸದಾಗಿ ನಿರ್ಮಾಣವಾಗುತ್ತಿರುವ ಕಾರ್ಮಿಕ ಇಲಾಖೆಯ ಕಛೇರಿಯ ಕಟ್ಟಡಗಳ ಮೇಲೆ ಮಂಡಳಿಯ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಪ್ರತ್ಯೇಕ ಮಹಡಿಯನ್ನು ಮಂಡಳಿಯ ವತಿಯಿಂದ ನಿರ್ಮಿಸಲು ಅನುದಾನವನ್ನು ನಿಗದಿ ಪಡಿಸಿ ಅನುಮೋದನೆ ನೀಡಿರುವುದರಿಂದ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಕೆಲಸ ಕಾರ್ಯಗಳಿಗಾಗಿ ಸದರಿ ಜಿಲ್ಲೆಗಳ ಕಾರ್ಮಿಕ ಇಲಾಖೆಯ ಕಟ್ಟಡದ ಮೇಲೆ ಪ್ರತ್ಯೇಕ ಮಹಡಿಯನ್ನು ಮೆ॥ ಕೆಆರ್ಐಡಿಎಲ್ ಸಂಸ್ಥೆ / ನಿರ್ಮಿತಿ ಕೇಂದ್ರದ ವತಿಯಿಂದ ನಿರ್ಮಿಸಲು ಸರ್ವಾನುಮತದಿಂದ ಸಭೆಯಲ್ಲಿ ಒಪ್ಪಿ ತೀರ್ಮಾನಿಸಲಾಯಿತು.

ಈ ಮೇಲಿನ ಚರ್ಚೆಯೊಂದಿಗೆ ಸಭೆಯನ್ನು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

(ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್)
ಸನ್ಮಾನ್ಯ ಕಾರ್ಮಿಕ ಸಚಿವರು ಹಾಗೂ
ಅಧ್ಯಕ್ಷರು, ಕರ್ನಾಟಕ ಕಟ್ಟಡ ಮತ್ತು ಇತರೆ
ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ,
ಬೆಂಗಳೂರು